# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

## ಕೇಂದ್ರ ಗ್ರಂಥಾಲಯ

**ಜ್ಞಾನಸಾಗರ, ಬಳ್ಳಾರಿ–583105**

---

## ವಿಶ್ವವಿದ್ಯಾಲಯ ಕೇಂದ್ರ ಗ್ರಂಥಾಲಯದ ಶೈಕ್ಷಣಿಕ ಸಂಪನ್ಮೂಲ ಹಾಗೂ ಸೇವಾ ವಿವಾರಗಳು

01. ವಿಶ್ವವಿದ್ಯಾಲಯ ಕೇಂದ್ರ ಗ್ರಂಥಾಲಯದಲ್ಲಿ ಎಲ್ಲಾ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಅಧ್ಯಯನಕ್ಕಾಗಿ, 21,970 ಪುಸ್ತಕಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಅಧ್ಯಯನದ ಅನುಕೂಲಕ್ಕಾಗಿ ಪ್ರತ್ಯೇಕ ಪುಸ್ತಕ ಸಂಗ್ರಹಾಗಾರ (Book Bank) ದಲ್ಲಿ 8.806 ಪುಸ್ತಕಗಳು, ಹಾಗೂ ಕೊಡುಗೆ ಪಡೆದ ಪುಸ್ತಕಗಳು 1,522 ಪುಸ್ತಕಗಳು, ಒಟ್ಟು 32,298 ಪುಸ್ತಕಗಳು ಲಭ್ಯವಿರುತ್ತವೆ.
02. ಮೇಲ್ಕಾಣಿಸಿದ ಎಲ್ಲಾ ಪುಸ್ತಕಗಳನ್ನು ವೈಜ್ಞಾನಿಕವಾಗಿ ವರ್ಗೀಕರಣ ಮಾಡಿ, ಸಂಬಂಧಿಸಿದ ರ್‍ಯಾಕ್‌ಗಳಲ್ಲಿ ಸ್ಥಳೀಕರಿಸಲಾಗಿದೆ.
03. ಎಲ್ಲಾ ಪುಸ್ತಕಗಳ ಮುಖಪುಟದ scanನ ಪ್ರತಿಯೊಂದಿಗೆ E-Lib ತಂತ್ರಾಂಶದಲ್ಲಿ ಅಳವಡಿಸಿದ್ದು, ವಿದ್ಯಾರ್ಥಿಗಳು ಸದರಿ ತಂತ್ರಾಂಶವನ್ನು ಬಳಸಿ ಪುಸ್ತಕಗಳ ಲಭ್ಯತೆ ಹಾಗೂ ಅದರ ಸ್ಥಳವನ್ನು ಸುಲಭವಾಗಿ ತಿಳಿದುಕೊಳ್ಳಬಹುದು.
04. ಗ್ರಂಥಾಲಯದಲ್ಲಿ ಪರಾಮರ್ಶನ ಸೇವೆ ಹಾಗೂ ಪುಸ್ತಕಗಳ ಎರವಲು ಸೇವೆಯನ್ನು ಒದಗಿಸಲಾಗಿದೆ.
05. ಗ್ರಂಥಾಲಯದ ಸೇವೆಯನ್ನು ಪಡೆದುಕೊಳ್ಳಲು ಪ್ರತಿಯೊಬ್ಬ ವಿದ್ಯಾರ್ಥಿಗೆ ಬಾರ್‌ಕೋಡ್ ಮುದ್ರಿತ ಗುರುತಿನ ಪತ್ರ (Identity Card) ನೀಡಲಾಗಿದೆ.
06. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಳಗ್ಗೆ 8 ಗಂಟೆಯಿಂದ ಸಂಜೆ 8 ಗಂಟೆಯವರೆಗೆ ಗ್ರಂಥಾಲಯವು ಕಾರ್ಯನಿರ್ವಹಿಸುತ್ತದೆ.
07. ಹಿಂದಿನ ಸೆಮಿಸ್ಟರ್ ಪ್ರಶ್ನೆಪತ್ರಿಕೆಗಳನ್ನು ಹಾಗೂ ವಿದ್ಯುನ್ಮಾನ–ಪುಸ್ತಕ (e-book) ಗಳನ್ನು D-Space portal ನಲ್ಲಿ ಒದಗಿಸಲಾಗಿದೆ.
08. ವಿಶ್ವವಿದ್ಯಾಲಯದಿಂದ Ph.D ಪಡೆದಿರುವ ವಿದ್ಯಾರ್ಥಿಗಳ ಮಹಾಪ್ರಬಂಧಗಳನ್ನು UGC ಯ ಶೋಧಸಿಂಧು ಜಾಲತಾಣದಲ್ಲಿ ಒದಗಿಸಲಾಗಿದೆ. ಸದರಿ ಪ್ರಬಂಧಗಳ ಮುದ್ರಿತ ಪ್ರತಿಗಳನ್ನು ಪರಾಮರ್ಶನಕ್ಕಾಗಿ ಗ್ರಂಥಾಲಯದಲ್ಲಿ ವ್ಯವಸ್ಥೆ ಮಾಡಲಾಗಿದೆ.
09. ವಿಶ್ವವಿದ್ಯಾಲಯದ ಅಧ್ಯಾಪಕರ ಪ್ರಕಟಿತ ಪ್ರಬಂಧಗಳ ವಿವರಗಳನ್ನು Vidwan ಜಾಲತಾಣದಲ್ಲಿ ಅಳವಡಿಸಲಾಗಿದೆ. ಪ್ರಕಟಿತ ಪುಸ್ತಕ ಹಾಗೂ ಪ್ರಬಂಧಗಳ ಮುದ್ರಿತ ಪ್ರತಿಗಳನ್ನು ಪರಾಮರ್ಶನಕ್ಕಾಗಿ ಗ್ರಂಥಾಲಯದಲ್ಲಿರಿಸಲಾಗಿದೆ.
10. ಗ್ರಂಥಾಲಯದಲ್ಲಿ ಪ್ರತ್ಯೇಕವಾಗಿ Digital Library ಯನ್ನು ಒದಗಿಸಲಾಗಿದೆ. E-Shodh Sindhu ಮುಖಾಂತರ ಹಲವಾರು Journal ಗಳಲ್ಲಿ ಪ್ರಕಟಿತ ಲೇಖನಗಳನ್ನು ಅಧ್ಯಯನಿಸಬಹುದಾಗಿದೆ.
11. ಗ್ರಂಥಾಲಯದಲ್ಲಿ MatLab ತಂತ್ರಾಂಶವನ್ನು ಅಳವಡಿಸಲಾಗಿದ್ದು, ವಿದ್ಯಾರ್ಥಿಗಳು ಸಂಶೋಧನೆಗಾಗಿ ದತ್ತಾಂಶಗಳ ವಿಶ್ಲೇಷಣೆಗಾಗಿ ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ.
12. ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಹಲವಾರು ನಿಯತಕಾಲಿಕೆಗಳು ಹಾಗೂ ಸಂಬಂಧಿತ ಪುಸ್ತಕಗಳ ವ್ಯವಸ್ಥೆ ಮಾಡಲಾಗಿದೆ. ದಿನಪತ್ರಿಕೆಗಳ ಓದುಗರಿಗೆ ಪ್ರತ್ಯೇಕ ವಾಚನಾಲಯವನ್ನು ವ್ಯವಸ್ಥೆ ಮಾಡಲಾಗಿದೆ.

**ಗ್ರಂಥಪಾಲಕರು**